ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ: ಎಡಿಎಂ2 ಶಾ.ಪ್ರಾ.ಮಿಂ.ಸಂ -01/2012-13 ದಿನಾಂಕ:22/05/2012

**ಸುತ್ತೋಲೆ**

ವಿಷಯ:- 2012-13ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಮತ್ತು ಮಿಂಚಿನ ಸಂಚಾರ

******

2012-13ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತಿದ್ದು ಅದಕ್ಕೆ ಪೂರ್ವಭಾವಿಯಾಗಿ ತಯಾರಿಯನ್ನು ಮುಂದಿನ ಎರಡೂ ಕಾರ್ಯಗಳಿಗೆ ಮಾಡಿಕೊಳ್ಳಲು ತಿಳಿಸಿದೆ.

**1) ಶಾಲೆ ಪ್ರಾರಂಭ ಮತ್ತು ಪ್ರಾರಂಭೋತ್ಸವ:**

ಶಾಲೆಯ ಆವರಣ, ಶಾಲಾ ಕೊಠಡಿಗಳನ್ನು ಸ್ವಚ್ಛಗೊಳಿಸುವುದು, ಕುಡಿಯುವ ನೀರು ಮತ್ತು ಶೌಚಾಲಯಗಳು ಸುಸ್ಥಿತಿಯಲ್ಲಿರುವಂತೆ ವ್ಯವಸ್ಥೆಗೊಳಿಸುವುದು. ಶಾಲೆಯನ್ನು ತಳಿರು ತೋರಣಗಳಿಂದ ಸಿಂಗರಿಸುವುದು. ವಿದ್ಯಾರ್ಥಿಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಸಿಹಿ ಹಂಚುವ ವ್ಯವಸ್ಥೆಯನ್ನು ಮಾಡುವುದು. ಶಾಲಾ ಪ್ರಾರಂಭೋತ್ಸವವನ್ನು ಎಸ್.ಡಿ.ಎಂ.ಸಿ ಮತ್ತು ಸ್ಥಳೀಯ ಗಣ್ಯರು, ಸಾರ್ವಜನಿಕರ ಮತ್ತು ಪೋಷಕರ ಉಪಸ್ಥಿತಿಯಲ್ಲಿ ನೆರವೇರಿಸುವುದು.

ಒಂದು ಮತ್ತು ಆರನೇ ತರಗತಿಗೆ ಸೇರಬಯಸುವ ವಿದ್ಯಾರ್ಥಿಗಳಿಗೆ ಶಾಲಾ ಪ್ರಾರಂಭದ ದಿನ ಅಹ್ಲಾದಕರ ಸಂದರ್ಭ ಆಗಿರುವಂತೆ ಅಧ್ಯಾಪಕರು, ಅವರನ್ನು ನಡೆಸಿಕೊಳ್ಳಬೇಕು. ಈ ಸಂಗತಿ ಶಾಲಾ ಅವಧಿಯ ಬೇರೆಲ್ಲಾ ದಿನಗಳಲ್ಲೂ ಪ್ರಸ್ತುತವಾದರೂ ವಿದ್ಯಾರ್ಥಿ ಶಾಲೆಗೆ ಬಂದ ದಿನ ವಿಶೇಷವಾಗಿ ಅವನಿಗೆ / ಅವಳಿಗೆ ಅಪ್ಯಾಯಮಾನವಾದ ದಿನವಾಗಿರುವಂತೆ ನೋಡಿಕೊಳ್ಳಬೇಕು. ಇದರಿಂದ ವಿದ್ಯಾರ್ಥಿ ತನ್ನ ವ್ಯಾಸಂಗ ಅವಧಿಯಲ್ಲಿ ಲವಲವಿಕೆಯಿಂದ ಕಳೆಯಲು ಪ್ರೇರಣೆ ನೀಡಿದಂತೆ ಆಗುತ್ತದೆ.

**2) ಮಿಂಚಿನ ಸಂಚಾರ :**

ಮಿಂಚಿನ ಸಂಚಾರದ ಪ್ರಧಾನ ಆಶಯ ಎಲ್ಲಾ ಶಾಲೆಗಳು ತೆರೆಯಲ್ಪಟ್ಟಿವೆಯೇ ಮತ್ತು ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗಿವೆಯೇ ಎಂಬುದನ್ನು ಮೇಲ್ವಿಚಾರಕರು ಖಚಿತಪಡಿಸಿಕೊಳ್ಳುವ ಕಾರ್ಯಕ್ರಮವಾಗಿದೆ. ಇದೊಂದು ಕ್ಷಿಪ್ರ ಭೇಟಿ. ಇದರ ಸ್ವರೂಪವನ್ನು ಮುಂಧೆ ವಿವರಿಸಿದೆ.

- ✓ ದಿನಾಂಕ 30.5.2012ರಿಂದ 8.6.2012ರವರೆಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.
- ✓ ಇದಕ್ಕಾಗಿ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರಿಬ್ಬರೂ ಜಿಲ್ಲಾ ಹಂತದಲ್ಲಿ ತಮ್ಮ ಎರಡೂ ಕಛೇರಿಗಳಲ್ಲಿರುವ ಮೇಲ್ವಿಚಾರಕ / ಅಧಿಕಾರಿಗಳನ್ನು ಗಮನದಲ್ಲಿಟ್ಟುಕೊಂಡು ಯಾವ ಯಾವ ಸ್ಥಳಗಳಿಗೆ ಯಾವ ಅಧಿಕಾರಿಗಳು ಹೋಗಬೇಕೆಂದು ಯೋಜನೆ ತಯಾರಿಸುವುದು ಹಾಗೂ ಅದರಂತೆ ಸೂಚನೆಗಳನ್ನು ಕೊಡುವುದು.
- ✓ ಇದೇ ರೀತಿ ಬ್ಲಾಕ್ ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯವರು ತಮ್ಮ ವ್ಯಾಪ್ತಿಯಲ್ಲಿರುವ ಮೇಲ್ವಿಚಾರಕ / ಅಧಿಕಾರಿಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ತಯಾರಿಸಿ ಸೂಚನೆಯನ್ನು ನೀಡುವುದು.
- ✓ ಅಗತ್ಯವೆನಿಸಿದಲ್ಲಿ ಎರಡು ಹಂತದಲ್ಲಿ ಸಭೆಯನ್ನು ನಡೆಸಿ ಕಾರ್ಯಕ್ರಮದ ವಿನ್ಯಾಸವನ್ನು ರಚಿಸಿಕೊಳ್ಳುವುದು.

- ✓ ಹೀಗೆ ನಿಯೋಜಿಸಲ್ಪಟ್ಟ ಮೇಲ್ವಿಚಾರಕ / ಅಧಿಕಾರಿಯು ಸಂಬಂಧಿಸಿದ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿ ಹಿಮ್ಮಾಹಿತಿಯನ್ನು ಅಧ್ಯಾಪಕರಿಗೆ ನೀಡುವುದು. ಈ ಭೇಟಿಯ ಅವಧಿ ಒಂದು ಶಾಲೆಗೆ ಸುಮಾರು 30 ರಿಂದ 40 ನಿಮಿಷ ಇರಬಹುದು.
- ✓ ಅವಲೋಕಿಸಬೇಕಾದ ಅಂಶಗಳೆಂದರೆ ಶಾಲಾ ಕೊಠಡಿಗಳು ಶಾಲೆಯ ಆವರಣ, ಸ್ವಚ್ಛವಾಗಿದೆಯೇ? ಶೌಚಾಲಯ ಮತ್ತು ಕುಡಿಯುವ ನೀರು ವ್ಯವಸ್ಥೆಗೊಳಿಸಲಾಗಿದೆಯೇ? ಮಧ್ಯಾಹ್ನದ ಉಪಾಹಾರ ವ್ಯವಸ್ಥೆಗೊಳಿಸಿದ್ದಾರೆಯೇ? ಪಠ್ಯಪುಸ್ತಕ, ನೋಟ್ ಪುಸ್ತಕ, ಸಮವಸ್ತ್ರ ಇವುಗಳು ಹಂಚಲ್ಪಟ್ಟಿವೆಯೇ ? ವಿದ್ಯಾರ್ಥಿಗಳ ದಾಖಲಾತಿ ಹಾಗೂ ಹಾಜರಾತಿಯೂ ಸಮರ್ಪಕವಿದೆಯೇ? ಸೇತುಬಂಧ ಕಾರ್ಯಕ್ರಮ ನಡೆಯುತ್ತಿದೆಯೇ? ಸಮಗ್ರ ವಾರ್ಷಿಕ ಯೋಜನೆ ತಯಾರಿ ನಡೆದಿದೆಯೇ? ಶಾಲಾ ಶೈಕ್ಷಣಿಕ ಯೋಜನೆ ತಯಾರಿ ನಡೆದಿದೆಯೇ? ಶಿಕ್ಷಕರ/ ತರಗತಿ ವೇಳಾಪಟ್ಟಿ ತಯಾರಿ ನಡೆದಿದೆಯೇ? ಶಿಕ್ಷಕರಿಗೆ ಕಾರ್ಯ ಹಂಚಿಕೆ ಇತ್ಯಾದಿ ತಯಾರಿ ಆಗುತ್ತಿದೆಯೆ?ಎಂಬ ಅಂಶಗಳನ್ನು ಅವಲೋಕಿಸಿ ಸೂಕ್ತ ಹಿಮ್ಮಾಹಿತಿಯನ್ನು ಅಧ್ಯಾಪಕರಿಗೆ ನೀಡಬೇಕು.
- ✓ ಈ ಕಾರ್ಯವು ಮುಗಿದ ಬಳಿಕ ಕ್ರೋಡೀಕೃತ ವರದಿಯನ್ನು ಉಪನಿರ್ದೇಶಕರು (ಆಡಳಿತ) ರವರು ದಿನಾಂಕ 15/6/2012ರ ಒಳಗೆ ಆಯಾ ಆಯುಕ್ತಾಲಯದ ಅಪರ ಆಯುಕ್ತರಿಗೆ ಮತ್ತು ಬೆಂಗಳೂರು ಮತ್ತು ಮೈಸೂರು ವಿಭಾಗದವರು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ತಲುಪುವಂತೆ ವರದಿ ಕಳುಹಿಸಬೇಕು.

(ತುಷಾರ್ ಗಿರಿ ನಾಥ್)
**ಆಯುಕ್ತರು**

**ಇವರಿಗೆ,**

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲು ತಿಳಿಸಿದೆ.
2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲು ತಿಳಿಸಿದೆ.

ಪ್ರತಿಗಳು

1) ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ಇವರ ಮಾಹಿತಿಗಾಗಿ
3) ನಿರ್ದೇಶಕರು (ಪ್ರಾಥಮಿಕ) ಪ್ರೌಢ / ಡಿ.ಎಸ್.ಇ.ಆರ್.ಟಿ / ಕೆ.ಎಸ್.ಇ.ಇ.ಬಿ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು / ಇತರೆ ಪರೀಕ್ಷೆಗಳು / ಸರ್ವ ಶಿಕ್ಷಣ ಅಭಿಯಾನ / ಆರ್.ಎಂ.ಎಸ್.ಎ / ಗುಲ್ಬರ್ಗಾ ಮತ್ತು ಧಾರವಾಡ ಆಯುಕ್ತಾಲಯದ ನಿರ್ದೇಶಕರುಗಳಿಗೆ ಮಾಹಿತಿಗಾಗಿ.
4) ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರುವಿಭಾಗ, ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ
5) ಪ್ರಾಂಶುಪಾಲರು, ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ, ಮೈಸೂರು, ಜಮಖಂಡಿ, ಮಂಗಳೂರು, ಗುಲ್ಬರ್ಗಾ, ಬೆಳಗಾಂ ಇವರಿಗೆ ಮಾಹಿತಿಗಾಗಿ

**E:\ADM-2\ಶಾಲಾ ಪ್ರಾರಂಭೋತ್ಸವ.doc**